ಕಾಡು ಮೃಗಗಳಿಂದಾದ ಬೆಳೆಹಾನಿಗೆ ಪರಿಹಾರ ಧನ

180(508); ಶ್ರೀ ಅರವಿಂದ ಚಂದ್ರಕಾಂತ್ ಪಾಟೀಲ್ (ಖಾನಾಪುರ)

ಅ) ಖಾನಾಪುರ ತಾಲ್ಲೂಕಿನಲ್ಲಿ ಕಾಡುಮೃಗಗಳಿಂದ ಬೆಳೆಹಾನಿಯಾಗುತ್ತಿದ್ದು, ಬೆಳೆಹಾನಿಯಾದ ರೈತರಿಗೆ ನೀಡುವ ಪರಿಹಾರಧನದಲ್ಲಿ ಎಲ್ಲರಿಗೂ ಒಂದೇ ರೀತಿಯ ಮೊತ್ತವನ್ನು ಪಾವತಿಸುತ್ತಿದ್ದು ಹೆಚ್ಚು ಬೆಳೆ ಬೆಳೆದು ಹಾನಿಗೊಳಗಾದ ರೈತರಿಗೆ ಅನ್ಯಾಯ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? (ನೀಡುವುದು)

ಆ) ಕಾಡುಮೃಗಗಳಿಂದ ಬೆಳೆಹಾನಿ ಆದ ರೈತರಿಗೆ ಪರಿಹಾರ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಕಾಡುಮೃಗಗಳಿಂದ ಬೆಳೆಹಾನಿಯಾದ ಪರಿಹಾರ ಮೊತ್ತವನ್ನು ಹೆಚ್ಚಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

ಶ್ರೀ ಬಿ.ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು)

ಅ) ಖಾನಾಪುರ ತಾಲ್ಲೂಕಿನಲ್ಲಿ ಕಾಡುಮೃಗಗಳಿಂದ ಬೆಳೆಹಾನಿಯಾಗುತ್ತಿದ್ದು. ಬೆಳೆಹಾನಿಯಾದ ರೈತರಿಗೆ ನೀಡುವ ದಯಾತ್ಮಕಧನದಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲದೇ

ಸರ್ಕಾರದ ಆದೇಶದ ಪ್ರಕಾರ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. ಬೆಳೆನಾಶ ಪ್ರಕರಣಗಳು

ಅ, ₹7,500/– ವರೆಗಿನ ಮೊತ್ತದ ಬೆಳೆನಾಶ ಬೆಳೆನಾಶದ – ಪೂರ್ಣ ಮೊತ್ತ...

ಆ. ₹ 7,500/–ಗಳಿಗೆ ಮೇಲ್ಪಟ್ಟ ಹಾಗೂ ₹35,000/– ಗಳವರೆಗಿನ ಮೊತ್ತದ ಬೆಳೆನಾಶಕ್ಕೆ ಶೇಕಡಾ 50 ರಷ್ಟು ದಯಾತ್ಮಕಧನ, ಕನಿಷ್ಟ ₹ 7,500/– ಮತ್ತು ಗರಿಷ್ಟ ₹ 21.250/–

ಇ. ₹ 35,000/– ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡಾ 30ರಷ್ಟು ದಯಾತ್ಮಕಧನ, ಕನಿಷ್ಠ ₹ 21,250/– ಮತ್ತು ಗರಿಷ್ಟ ₹ 50,000/– ವನ್ಯಪ್ರಾಣಿಗಳಿಂದ ಉಂಟಾದ ಬೆಳೆಹಾನಿ ಪಾವತಿಸುವ ದಯಾತ್ಮಕ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸರ್ಕಾರಿ ಜಮೀನನ್ನು ಗ್ರಾಮಸ್ಥರಿಗೆ ಹಂಚಿಕೆ ಮಾಡುವುದು

181(509); ಶ್ರೀ ಅರವಿಂದ್ ಚಂದ್ರಕಾಂತ್ ಪಾಟೀಲ್ (ಖಾನಾಪುರ)

ಅ) ಖಾನಾಪುರ ತಾಲ್ಲೂಕಿನ ತೋರಾಳಿ ಗ್ರಾಮಸ್ಥರು ಸುಮಾರು ನೂರಾರು ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಈ ಜಮೀನುಗಳನ್ನು ಹೊರತುಪಡಿಸಿ ಇವರಿಗೆ ಬೇರಾವುದೇ ಜಮೀನುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇವರಿಗೆ ಒಂದು ಅಥವಾ ಎರಡು ಎಕರೆಯಂತೆ ಜಮೀನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಖಾನಾಪುರ ತಾಲ್ಲೂಕಿನ ತೋರಾಳಿ ಗ್ರಾಮದಲ್ಲಿ ಒಟ್ಟು 35 ಸರ್ವೆ ನಂಬರುಗಳಲ್ಲಿ, 1001 ಎಕರೆ 17 ಗುಂಟೆ 08 ಆಣೆ ಜಮೀನಿರುತ್ತದೆ. ಸದರಿ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 269 ಆರ್‌ಇಹೆಚ್ 1998, ದಿನಾಂಕ:29–03–2000 ರ ಪ್ರಕಾರ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕಲಂ 77(3)ರಡಿ ಮಹಾದಾಯಿ ಯೋಜನೆಯಡಿಯಲ್ಲಿ ಸ್ಥಳಾಂತರಗೊಳ್ಳಬಹುದಾದ ಜನರಿಗೆ ಪುನರ್ ವಸತಿ ಕಲ್ಪಿಸಲು ಕಾಯ್ದಿರಿಸಲಾಗಿದೆ.

ಸದರಿ ಕಾಯ್ದಿರಿಸಿದ ಜಮೀನನ್ನು 20 ಜನರು ತಮಗೆ ಮಂಜೂರು ಮಾಡಲು ಅವರು ಸಲ್ಲಿಸಿದ ಅರ್ಜಿಗಳಲ್ಲಿ ಅವರು ಬೇರೆ